# ‘ರೈತ ತೀರ್ಪು’ ಕೃಷಿಕ ನ್ಯಾಯ ಮಂಡಳಿಯ ವರದಿ ಬಿಡುಗಡೆ

ANDOLANA ಆಂದೋಲನ 16/11/10



**ನಗರದ ಪತ್ರಕರ್ತರ ಭವನದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ರೈತ ತೀರ್ಪು ಎಂಬ ಹೆಸರಿನ ಪುಸ್ತಕವನ್ನು ಮತ್ತು ಕೃಷಿಕರ ನ್ಯಾಯ ಮಂಡಳಿಯ ನಡಾವಳಿಗಳ ದೃಶ್ಯಗಳನ್ನು ಒಳಗೊಂಡ ವಿಡಿಯೋ ಸಿ.ಡಿ. ಯನ್ನು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಅವರು ಬಿಡುಗಡೆ ಮಾಡಿದರು. ಸಂತೋಷ್ ಕೌಲಗಿ, ಪಿ.ವಿ. ಸತೀಶ್, ರಾಮಚಂದ್ರ ಉಪಸ್ಥಿತರಿದ್ದರು.**

ಮೈಸೂರು, ನ. ೧೫-ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣಕ್ಕಾಗಿ ೨೦೦೯ರ ಡಿಸೆಂಬರ್‌ನಲ್ಲಿ ಆಯೋಜಿಸಿದ್ದ ರೈತ ತೀರ್ಪು ಎಂಬ ಕೃಷಿಕರ ನ್ಯಾಯ ಮಂಡಳಿಯ ಪ್ರಕ್ರಿಯೆಗಳನ್ನು ಒಳಗೊಂಡ ವರದಿಯನ್ನು ಸೋಮವಾರ ನಗರದಲ್ಲಿ ಬಿಡುಗಡೆ ಮಾಡಲಾಯಿತು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಅವರು ನಗರದ ಪತ್ರಕರ್ತರ ಭವನದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ರೈತ ತೀರ್ಪು ಎಂಬ ಹೆಸರಿನ ಪುಸ್ತಕವನ್ನು ಮತ್ತು ಕೃಷಿಕರ ನ್ಯಾಯ ಮಂಡಳಿಯ ನಡಾವಳಿಗಳ ದೃಶ್ಯಗಳನ್ನು ಒಳಗೊಂಡ ವಿಡಿಯೋ ಸಿ.ಡಿ. ಯನ್ನು ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ರೈತ ತೀರ್ಪು ವೇದಿಕೆಯು ಬೆಂಗಳೂರಿನಲ್ಲಿ ಹಾಗೂ ಕನಕಪುರದ ಬಳಿ ಏರ್ಪಡಿಸಿದ್ದ ನಾಲ್ಕು ದಿನಗಳ ಸಂವಾದದಲ್ಲಿ ತಾವು ಸಹಾ ಪಾಲ್ಗೊಂಡಿದ್ದು, ವೇದಿಕೆಯು ಮಂಡಿಸುತ್ತಿರುವ ವಿಚಾರವಾದ ಮತ್ತು ಸಂಶೋಧನೆಗಳು ರೈತರ ಸಮಸ್ಯೆಗಳನ್ನು ನಿವಾರಿಸುವ ದಿಸೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದರು.

ನೂತನ ಸಂಶೋಧನೆಗಳ ಪ್ರಯೋಜನಗಳ ಬಗ್ಗೆ ರೈತರಿಗೆ ಮನದಟ್ಟು ಮಾಡಿಕೊಡುವ ಹಾಗೂ ರೈತರ ಸಮಸ್ಯೆಗಳ ಬಗ್ಗೆ ಸರ್ಕಾರ ಮತ್ತು ಆಡಳಿತಗಾರರ ಗಮನ ಸೆಳೆಯುವಲ್ಲಿ ಸಹಾ ವೇದಿಕೆ ಯಶಸ್ವಿಯಾಗಿದೆ. ರೈತ ಮುಖಂಡರು, ವಿಜ್ಞಾನಿಗಳು, ಸಮಾಜ ಸುಧಾರಕರ ಜೊತೆ ನಡೆಸಿದ ಸಂವಾದದಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಕೃಷಿ ಕ್ಷೇತ್ರದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ವ್ಯಾಪಕ ಕೂಗು ಕೇಳಿಬಂದಿದೆ. ಆದ್ದರಿಂದ ಈಗಲಾದರೂ ರಾಸಾಯನಿಕಗಳ ಬಳಕೆಯನ್ನು ಕೈ ಬಿಟ್ಟು, ಸಾವಯವ ಕೃಷಿ ವಿಧಾನದೆಡೆಗೆ ಹೆಚ್ಚು ಗಮನಹರಿಸಬೇಕಾಗಿದೆ ಎಂದು ಹೇಳಿದರು.

ರೈತ ತೀರ್ಪಿನಲ್ಲಿ ಕೈಗೊಂಡ ತೀರ್ಮಾನಗಳನ್ನು, ಅದರ ಸಂದೇಶಗಳನ್ನು ಹಳ್ಳಿ ಹಳ್ಳಿಗೆ ತಲುಪಿಸುವ ಕಾರ್ಯ ನಡೆಯಬೇಕಿದೆ ಎಂದು ಶಾಂತಕುಮಾರ್ ಅಭಿಪ್ರಾಯಪಟ್ಟರು.

ರೈತ ತೀರ್ಪು ವರದಿಯ ಸಂಕಲನಕಾರರೂ, ಸಂಪಾದಕರೂ ಆದ ಸಂತೋಷ್ ಕೌಲಗಿ, ಕೃಷಿ ಸಂಶೋಧನೆಯ ಪ್ರಜಾ ತಾಂತ್ರೀಕರಣಕ್ಕಾಗಿ ದಕ್ಷಿಣ ಏಷ್ಯಾ ಒಕ್ಕೂಟ (ಆದರ್ಶ)ದ ಸಂಚಾಲಕರಾದ ಪಿ.ವಿ. ಸತೀಶ್, ರಾಮಚಂದ್ರ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಪತ್ರಕರ್ತರಿಗೆ ರೈತ ತೀರ್ಪು ಸಂವಾದದ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು.